ಶ್ರೀ ಡಿ. ಜಿ. ಬಸವನಗೌಡ.—ಮುಂದಿನ ವರ್ಷವಾದರೂ ಮಾಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಮಂಗಳೂರು ಮತ್ತು ಗುಲ್ಬರ್ಗಾ ವಿಶ್ವವಿದ್ಯಾನಿಲಯಕ್ಕೆ ಸ್ವಾಯತ್ತತೆ ಪ್ರಕಾರ ನಾವು ಈಗಾಗಲೇ ೨ ಕೋಟಿ ರೂ.ಗಳ ಹಣವನ್ನು ಖರ್ಚು ಮಾಡಿದ್ದೇವೆ. ಅವರು ಹೇಳಿದಹಾಗೆ ವಿಶ್ವವಿದ್ಯಾನಿಲಯದ ಕಾಯಿದೆಗೆ ತಿದ್ದುಪಡಿಯನ್ನು ತಂದಿದ್ದೇವೆ. ಯು. ಜಿ. ಸಿ. ಯವರಿಗೆ ನಾವು ಒಂದು ಪತ್ರ ಬರೆದು ಅಲ್ಲಿಂದ ಒಂದು ಟೀಮ್ ಕಳುಹಿಸಿಕೊಟ್ಟು ಗ್ರಾಂಟನ್ನು ಕೊಡುವ ಬಗ್ಗೆ ಹೇಳಿದ್ದೇವೆ. ಆದರೆ ಅವರಿಂದ ಇಲ್ಲಿಯವರೆಗೆ ಉತ್ತರ ಬರಲಿಲ್ಲ. ಅದಕ್ಕೋಸ್ಕರ ಅವರ ಹತ್ತಿರ ಹೋಗಿ ಚರ್ಚೆ ಮಾಡಿ, ಯಾವ ಹಂತದಲ್ಲಿದೆ ಎಂಬುದನ್ನು ನೋಡಿ, ಮುಂದಿನ ವ್ಯವಸ್ಥೆ ಬಗ್ಗೆ ಯೋಚನೆ ಮಾಡೋಣ.

ರಾಜ್ಯದಲ್ಲಿರುವ ಜಾನುವಾರುಗಳ ಕಸಾಯಿಖಾನೆಗಳು

೪೨೪ (೧೧೮೦) ಶ್ರೀ ಮಲ್ಲಾರಗೌಡ ಎಸ್. ಪಾಟೀಲ (ಸಂಕೇಶ್ವರ).—ಮಾನ್ಯ ಪಶು ಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

(ಅ) ಕರ್ನಾಟಕದಲ್ಲಿ ಪ್ರತಿದಿನ ಸರಾಸರಿ ಎಷ್ಟು ದನಗಳನ್ನು ವಧೆ ಮಾಡಲಾಗುವುದು.

(ಆ) ಕರ್ನಾಟಕದಲ್ಲಿ ಲೈಸನ್ಸ್ ಪಡೆದ ಎಷ್ಟು ಕಸಾಯಿ ಖಾನೆಗಳಿವೆ. ಅವು ಯಾರ ವಶಕ್ಕೊಳಪಟ್ಟಿದೆ.

(ಇ) ಹಸುಗಳನ್ನು ವಧೆ ಮಾಡದಿರಲು ಸರ್ಕಾರವು ಏನು ಕ್ರಮ ತೆಗೆದುಕೊಂಡಿದೆ.

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್ (ಪಶು ಸಂಗೋಪನಾ ಪಶು ವೈದ್ಯಕೀಯ ಹಾಗೂ ತೋಟಗಾರಿಕೆ ಸಚಿವರು).—

(ಅ) ೨೯೪.

(ಆ) ಕಸಾಯಿಖಾನೆಗಳು ೬೬೩ ಅವು ಆಯಾ ನಗರಸಭೆ ಮತ್ತು ಪುರಸಭೆಗಳ ಅಧೀನದಲ್ಲಿವೆ.

(ಇ) ಕರ್ನಾಟಕದ ಗೋಹತ್ಯಾ ನಿರೋಧ ಮತ್ತು ಜಾನುವಾರು ಸಂರಕ್ಷಣಾ ಅಧಿನಿಯಮ ೧೯೬೪ರ ಪ್ರಕಾರ ಹಸುಗಳ ಮತ್ತು ಕರುಗಳ ಹಾಗೂ ಎಮ್ಮೆಗಳ ವಧೆ ನಮ್ಮ ರಾಜ್ಯದಲ್ಲಿ ನಿಷೇಧಿಸಲ್ಪಟ್ಟಿದೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಈ ಪ್ರಶ್ನೆಗೆ ೨೯೪ ಎಂದು ಹೇಳಿದ್ದಾರೆ. ಒಟ್ಟು ೬೬೩ ಕಸಾಯಿ ಖಾನೆಗಳಿವೆ ಎಂದು ಹೇಳಿದ್ದಾರೆ ಆದರೆ ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿರತಕ್ಕದ್ದು ಸರಿಯಲ್ಲ. ಯಾರೋ ಒಬ್ಬ ಅಧಿಕಾರಿಗಳು ಉತ್ತರ ಬೆರೆದುಕೊಡುತ್ತಾರೆಂದು ಅದನ್ನು ನೋಡಿ, ಇಲ್ಲಿ ಸರಿಯಾದ ಉತ್ತರವನ್ನು ಕೊಡದೇ ಹೋದರೆ ಅದು ಸರಿಯಲ್ಲ. ಕರ್ನಾಟಕ ರಾಜ್ಯದಲ್ಲಿ ನವಂಗೆ ಗೊತ್ತಿರುವ ಹಾಗೆ ಅಂಕಿಅಂಶಗಳನ್ನು ತೆಗೆದುಕೊಂಡರೆ ಇದು ಬಹಳ ಹೆಚ್ಚಾಗುತ್ತದೆ. ಹೀಗಾದರೆ ಅನಿಮಲ್ ಹಸ್‌ಬೆಂಡರಿ ಅಭಿವೃದ್ಧಿ ಯಾಗುತ್ತದೆಯೇ ? ಇದು ಬಹಳ ಮಹತ್ವವಾದ ಪ್ರಶ್ನೆ ಇದೆ. ಯಾರ ರೈತಾಪಿ ಜನರಿದ್ದಾರೆ ಅವರ ಮನಸ್ಸಿಗೆ ನೋವು ಆಗುವ ಪ್ರಶ್ನೆ ಇದು. ಆ ದೃಷ್ಟಿಯಿಂದ ಬೆಂಗಳೂರು ನಗರ ಮುನಿಸಿಪಾಲಿಟಿ ಕಾರ್ಪೊರೇಷನ್‌ನಲ್ಲಿ ಎಷ್ಟು ಕಸಾಯಿ ಖಾನೆಗಳಿವೆ ? ಬೆಳಗಾಂನಲ್ಲಿ ಕಸಾಯಿ ಖಾನೆಗಳು ಎಷ್ಟಿವೆ ? ಯಾವ ಹಂತದಲ್ಲಿವೆ ಎಂಬುದನ್ನು ನಿರ್ದಿಷ್ಟವಾಗಿ ತಿಳಿಸಬೇಕು. ಯಾವ ಕಸಾಯಿಖಾನೆಯಲ್ಲಿ ಹಸುಗಳನ್ನು ಕಡಿಯುತ್ತಿದ್ದಾರೆ ಅಂಥವರ ಮೇಲೆ ಉಗ್ರವಾದ ಕ್ರಮವನ್ನು ತೆಗೆದುಕೊಳ್ಳಬೇಕು. ಸುಮಾರು ೭೨,೦೦೦ ಗೋಹತ್ಯೆ ಮಾಡಿ ದನಗಳನ್ನು ಕಡಿಯುತ್ತಿದ್ದಾರೆ. ಇದರ ಬಗ್ಗೆ ನಿರ್ದಿಷ್ಟವಾದ ವ್ಯವಸ್ಥೆಯನ್ನು ಮಾಡಬೇಕೆಂದು ಕೇಳುತ್ತೇನೆ.

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.—ಬೆಳಗಾಂನ ಅಂಕಿಸಂಖ್ಯೆ ನನ್ನ ಹತ್ತಿರ ಇಲ್ಲ. ಬೆಂಗಳೂರಿನದು ಮಾತ್ರ ನನ್ನ ಹತ್ತಿರ ಇದೆ. ಬೆಂಗಳೂರಿನ ಪಶು ಆಹಾರ ನಿಗಮದ ಆಶ್ರಯದಲ್ಲಿ

೩ ಮಾನ್ಯತೆ ಪಡೆದ ಕಸಾಯಿ ಖಾನೆಗಳು, ಬೆಂಗಳೂರು ನಿಗಮದ ಪರಿಮಿತಿಯಲ್ಲಿ ನಡೆಯುತ್ತಿದ್ದು ನಗರದ ಸಾರ್ವಜನಿಕರಿಗೆ ಆರೋಗ್ಯಕರವಾದ ಮಾಂಸವನ್ನು ಸರಬರಾಜು ಮಾಡುತ್ತಿವೆ. ಉಳಿದ ವಿವರಗಳು ಈ ರೀತಿ ಇವೆ.

ಕರು ಮತ್ತು ಆಡುಗಳು ವಧೆಯಾಗುತ್ತಿರುವ ಸಂಖ್ಯೆ.

ಕ್ರಮ ಸಂಖ್ಯೆ	ವರ್ಷ	ದನಗಳು	ಕುರಿಗಳು	ಮೇಕೆಗಳು	ಹಂದಿಗಳು
೧	೧೯೮೦–೮೧	೧,೧೧,೭೪೦	೬,೨೮,೯೬೬	೩,೮೩,೧೧೮	೧೦,೬೫೯
೨	೧೯೮೧–೮೨	೧,೩೭,೮೩೫	೮,೪೦,೫೧೭	೪,೧೯,೦೧೨	೧೪,೦೪೯
೩	೧೯೮೨–೮೩	೧,೨೧,೦೭೭	೭,೫೮,೪೦೨	೩,೮೩,೪೧೨	೧೧,೯೭೨
೪	೧೯೮೩–೮೪	೬೭,೮೨೮	೪,೩೦,೧೮೪	೨,೪೪,೯೩೭	೬,೫೩೧
	(೧–೪–೮೩	೩೧–೧೦–೮೩)			

ಹಸುಗಳನ್ನು ಕಡಿಯುತಕ್ಕದ್ದರ ಬಗ್ಗೆ ಏನಾದರೂ ಮಾಹಿತಿ ಇದ್ದರೆ ಕೊಡಿ ಆದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎನ್. ಚಿಕ್ಕೇಗೌಡ.—ತಾವು ಹಸುಗಳನ್ನು ಕಡಿಯಕೂಡದು ಎಂದು ಹೇಳಿದ್ದೀರಿ. ಹಸು ಹಾಲು ಕೊಡದೇ ಇರತಕ್ಕದ್ದು, ಕರು ಹಾಕದೇ ಇರತಕ್ಕದ್ದು, ಸಂತಾನ ಇಲ್ಲದೇ ಇರತಕ್ಕ ಹಸು ಗಳನ್ನು ಸುಮ್ಮನೆ ಮೇಯಿಸಿಕೊಂಡು ಇರಬೇಕೆಂದು ಹೇಳುತ್ತಿರಾ ?

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.—೧೯೬೪ರ ಜಾನುವಾರು ಸಂರಕ್ಷಣಾ ನಿಯಮದ ಪ್ರಕಾರ ಹಸುಗಳನ್ನು ಕಡಿಯುವ ಹಾಗಿಲ್ಲ.

ಶ್ರೀ ಎನ್. ಶಿವರಾವ್.—ನಮ್ಮ ತಾಲ್ಲೂಕಿನಲ್ಲಿ ಸ್ಥಳೀಯ ಆಕ್ಷೇಪಣೆ ಇದ್ದರೂ ಸಹ ನ್ಯಾಷನಲ್ ಹೈವೇ ಪಕ್ಕದಲ್ಲಿ ದನಗಳನ್ನು ಕಡಿಯುವ ಬಗ್ಗೆ ಡಿ.ಸಿ. ಯವರು ೨೪ ಗಂಟೆಯೊಳಗಾಗಿ ಪರವಾನಗಿ ಯನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ತಾವು ಏನು ಹೇಳುತ್ತೀರಿ ?

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.—ಗೋಮಾಂಸದ ಕಾಯಿದೆ ಅನ್ವಯ ಹೀಗೆ ಮಾಡುವುದ ಕ್ಕಾಗುವುದಿಲ್ಲ. ಆದಕ್ಕೆ ಪ್ರತ್ಯೇಕವಾದ ಪ್ರಶ್ನೆಯನ್ನು ಕೇಳಿದರೆ ಉತ್ತರ ಕೊಡುತ್ತೇನೆ.

ಶ್ರೀ ಎನ್. ಚಿಕ್ಕೇಗೌಡ.—ಬೆಂಗಳೂರಿನಲ್ಲಿ ಅನಧಿಕೃತವಾದ ಕಸಾಯಿಖಾನೆಗಳು ಸಾಕಷ್ಟು ಇವೆ. ನ್ಯಾಷನಲ್ ಹೈವೇ ರಸ್ತೆಯಲ್ಲಿ ಓಡಾಡುವಾಗ ವಧೆಯಾಗುತ್ತಿರುವುದನ್ನು ತಾವು ನೋಡಿದ್ದೀರೋ ಇಲ್ಲವೋ ಗೊತ್ತಿಲ್ಲ. ಅನಧಿಕೃತವಾಗಿ ಬೆಂಗಳೂರು ಮತ್ತಿತರ ಕಡೆ ಅವುಗಳನ್ನು ವಧೆ ಮಾಡುತ್ತಾ ಇರತಕ್ಕದ್ದು ತಮ್ಮ ಗಮನಕ್ಕೆ ಬಂದಿದೆಯೇ

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.—ಅದು ನನ್ನ ಗಮನಕ್ಕೆ ಬಂದಿಲ್ಲ. ಬಂದಾಗ ನೋಡೋಣ.

ಶ್ರೀ ಕೆ. ರಾಮಭಟ್.—ಕರ್ನಾಟಕದ ಗೋಹತ್ಯಾ ನಿರೋಧ ಮತ್ತು ಜಾನುವಾರು ಸಂರಕ್ಷಣಾ ಅಧಿನಿಯಮ ೧೯೬೪ರ ಪ್ರಕಾರ ಹಸುಗಳ ಮತ್ತು ಕರುಗಳ ಹಾಗೂ ಎಮ್ಮೆಗಳ ವಧೆ ನಮ್ಮ ರಾಜ್ಯದಲ್ಲಿ ನಿಷೇಧಿಸಲ್ಪಟ್ಟಿದ್ದರೂ ಕೂಡ ಹೊಸದಾಗಿ ಲೈಸನ್ಸ್ ಕೊಟ್ಟಿರುವುದರಿಂದ ನಮ್ಮ ಊರಿನಲ್ಲಿ ಒಂದು ಸ್ಪೋಟಕ ಪರಿಸ್ಥಿತಿ ಉಂಟಾಗಿದೆ. ಹೊಸದಾಗಿ ಅವರಿಗೆ ಏತಕ್ಕೆ ಲೈಸನ್ಸ್ ಕೊಟ್ಟಿರಿ ?

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.—ಹೊಸದಾಗಿ ಲೈಸನ್ಸ್ ಕೊಟ್ಟಿರುವುದು ನನಗೆ ಗೊತ್ತಿಲ್ಲ ಅದಕ್ಕೆ ಪ್ರತ್ಯೇಕವಾದ ಪ್ರಶ್ನೆಯನ್ನು ಕೇಳಿದರೆ ಉತ್ತರ ತರಿಸಿಕೊಡುತ್ತೇನೆ.

ಡಾ|| ವಿ. ಎಸ್. ಆಚಾರ್ಯ.—ಪ್ರಶ್ನೆಯು ಕ್ಲಿಯರ್ ಆಗೇ ಇದೆ. ಈ ಪ್ರಶ್ನೆಯಲ್ಲಿ ಏನಿದೆ ಎಂದರೆ, ಪ್ರಶ್ನೆ (ಇ)ನಲ್ಲಿ ರಾಜ್ಯದಲ್ಲಿ ಗೋವಧೆ ಮಾಡುವುದನ್ನು ನಿಷೇಧಿಸುವುದಕ್ಕೆ ಸಂಬಂಧಿಸಿದಂತೆ ಸರ್ಕಾರದವರು ಕೈಕೊಂಡ ಕ್ರಮಗಳೇನು ? ಅಂತ ಇದೆ. ಅದನ್ನೇ ನಾವು ಕೇಳುತ್ತಿದ್ದೇವೆ. ಏನು ಕ್ರಮಗಳನ್ನು ತಾವು ಕೈಗೊಂಡಿದ್ದೀರಿ ಎಂದು. ತಮಗೆ ಒಂದು ಉದಾಹರಣೆಯನ್ನು ಹೇಳ ಬೇಕಿದ್ದರೆ ಪರಿಂಗಿಪೇಟೆಯಲ್ಲಿ ನ್ಯಾಷನಲ್ ಹೈವೇ ಪಕ್ಕದಲ್ಲಿಯೇ ಒಂದು ಅಂಗಡಿಗೆ ಲೈಸೆನ್ಸ್ ಕೊಡುವ ಬಗ್ಗೆ ಎಲ್ಲಾ ಜಾತಿಯವರೂ, ಎಲ್ಲಾ ಮತಸ್ಥರೂ ಕೂಡ ವಿರೋಧ ಮಾಡಿದ್ದಾರೆ. ಹಾಗಿದ್ದರೂ ಕೊಟ್ಟಿದ್ದೀರಿ. ಈ ಬಗ್ಗೆ ಧರಣಿ ಎಲ್ಲಾ ನಡೆದಿದೆ, ಜಿಲ್ಲಾಧಿಕಾರಿಗಳ ಆಫೀಸಿನ ಮುಂದೆ ದೊಡ್ಡ ಧರಣಿಯೇ ಮಾಡಿದ್ದಾರೆ. ಇದರ ಬಗ್ಗೆ ತಾವೇನು ಕಾರ್ಯಕ್ರಮ ಕೈಗೊಂಡಿದ್ದೀರಿ ಅನ್ನುವುದನ್ನು ಹೇಳುತ್ತೀರಾ ?

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.—ಆ ಬಗ್ಗೆ ನನ್ನ ಹತ್ತಿರ ಈಗ ಮಾಹಿತಿ ಇಲ್ಲ. ತಾವು ಪ್ರತ್ಯೇಕವಾದ ಪ್ರಶ್ನೆ ಕೇಳಿದರೆ ಉತ್ತರ ತರಿಸಿಕೊಡುತ್ತೇನೆ.

ಶ್ರೀ ಮಲ್ಲಾರಿಗೌಡ ಪಾಟೀಲ್.—ತಾವು ಇದರ ಬಗ್ಗೆ ಏನಾದರೂ ಆದೇಶ ಕೊಟ್ಟಿದ್ದೀರಾ ?

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.—ಈ ಕಸಾಯಿ ಖಾನೆಗೆ ಲೈಸನ್ಸ್ ಕೊಡುವುದು ನಮ್ಮ ಇಲಾಖೆಗೆ ಬರುವುದಿಲ್ಲ. ಅದು ಹೆಚ್.ಯು.ಡಿ.ಗೆ ಬರುತ್ತದೆ. ಅವರೇನಾದರೂ ಕೊಟ್ಟಿದ್ದರೆ ಅವರು ಅದನ್ನು ಪರಿಶೀಲಿಸುತ್ತಾರೆ.

ಶ್ರೀ ಬಾಳಿಕುಂದ್ರಿ.—ಹಂದಿಸಾಕಾಣಿಕೆಯನ್ನು ಇಂಪ್ರೂವ್ ಮಾಡಿ ಈ ಜಾನುವಾರುಗಳ ವಧೆಯನ್ನು ತಪ್ಪಿಸುವುದಕ್ಕೆ ತಕ್ಕ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತೀರಾ ?

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.—ಅದು ಒಳ್ಳೆಯ ಸಲಹೆ.

ಶ್ರೀ ಮಲ್ಲಾರಿಗೌಡ ಪಾಟೀಲ್.—ಈ ಸ್ಲಾಟರ್ ಹೌಸ್‌ಗೆ ಲೈಸನ್ಸ್ ಕೊಡದೇ ಇರುವ ಹಾಗೆ ಒಂದು ವಿಶೇಷ ಕಾಯಿದೆ ತಂದು ತಿದ್ದುಪಡಿ ಮಾಡುತ್ತೀರಾ ?

ಶ್ರೀ ವಿಶ್ವನಾಥರೆಡ್ಡಿ ಮುದ್ನಾಳ್.—ಲೈಸನ್ಸ್ ಕೊಡುವ ಹಕ್ಕು ನಮಗಿಲ್ಲ.

ಅರಸೀಕೆರೆ ಚುನಾವಣಾ ಕ್ಷೇತ್ರದಲ್ಲಿರುವ ಸರ್ಕಾರಿ, ಪ್ರೌಢಶಾಲೆಗಳು

೪೨೫ (೭೮೭) ಶ್ರೀ ಜಿ. ಎಸ್. ಬಸವರಾಜು (ಅರಸೀಕೆರೆ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಅರಸೀಕೆರೆ ಕ್ಷೇತ್ರದಲ್ಲಿರುವ ಸರ್ಕಾರಿ ಪ್ರೌಢಶಾಲೆಗಳ ಸಂಖ್ಯೆ ಎಷ್ಟು ?

ಆ) ಸರ್ಕಾರಿ ಕಟ್ಟಡ ಇಲ್ಲದೆ ಇರುವ ಪ್ರೌಢಶಾಲೆಗಳೆಷ್ಟು ?

ಇ) ಸದರಿ ಶಾಲೆಗಳಲ್ಲಿ ಬಾಡಿಗೆ ಕಟ್ಟಡದಲ್ಲಿ ನಡೆಸಲಾಗುತ್ತದೆಯೇ ? ಅವುಗಳಿಗೆ ಸ್ವಂತ ಕಟ್ಟಡಗಳನ್ನು ಒದಗಿಸಲು ಸರ್ಕಾರದವರು ಕೈಗೊಂಡ ಕ್ರಮವೇನು ?

ಶ್ರೀ ಬಿ. ರಾಚಯ್ಯ (ಶಿಕ್ಷಣ ಮಂತ್ರಿಗಳು).—

ಅ) ಹದಿಮೂರು (೧೩) ಸರ್ಕಾರಿ ಪ್ರೌಢಶಾಲೆಗಳು, ಅರಸೀಕೆರೆ ಕ್ಷೇತ್ರದಲ್ಲಿವೆ.

ಆ) ಒಂದು (೧).

ಇ) ಯಾವ ಶಾಲೆಗಳೂ ಬಾಡಿಗೆ ಕಟ್ಟಡದಲ್ಲಿ ನಡೆಸಲಾಗುತ್ತಿರುವುದಿಲ್ಲ. ಆದರೆ 'ಆ'ಲ್ಲಿ ನಮೂದಿಸಿರುವ ಒಂದು ಶಾಲೆಯನ್ನು ಮಾತ್ರ ಅಂದರೆ ಹೆಣ್ಣುಮಕ್ಕಳ ಶಾಲೆಯನ್ನು ಸರ್ಕಾರಿ ಪ್ರೌಢಶಾಲೆಯ ಕಟ್ಟಡದಲ್ಲಿ ಸದರಿಯ ಪ್ರಕಾರ ಈಗ ನಡೆಸಲಾಗುತ್ತಿದೆ. ಹಿಂದೆ ತಾಲ್ಲೂಕ್ ಬೋರ್ಡ್ ಚತ್ರದಲ್ಲಿ ನಡೆಸಲಾಗಿದ್ದು ಈಗ ಆ ಕಟ್ಟಡವು ಶಿಥಿಲ ಸ್ಥಿತಿಯಲ್ಲಿರುವುದರಿಂದ ಮೇಲೆ ಹೇಳಿರುವ ವ್ಯವಸ್ಥೆಯನ್ನು ಮಾಡಲಾಗಿದೆ.